ದಿಃ 21.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಹೆಚ್.ಎಸ್ ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಾವ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, Mutation Register ನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು ದಿಃ 27.07.2015 ರ ಕ್ರಯ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು. ಮೂಲ ದಾವ ಸಂಖ್ಯೆ 106/2011 ರ ತೀರ್ಪಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಆರ್.ಎ.11/2014 ರ ತೀರ್ಪಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ಆರ್.ಎ.11/2014 ರ ಡಿಕ್ರಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ಆರ್.ಎಸ್.ಎ.839/2015 ರ ತೀರ್ಪಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ಅವಲು ಜಾರಿ ಸಂಖ್ಯೆ 12/2014 ರಲ್ಲಿ ಭೇಲೀಪ್ ನೀಡಿದ ಷರದ ದೃಢೀಕೃತ ನಕಲನ್ನು ನಿ.ಪಿ.8 ಎಂದು ಗುರುತಿಸಲಾಯಿತು. ದಿಃ 13.03.2020 ರಂದು ಭೂ ದಾಖಲೆ ಸಹಾಯಕ ನಿರ್ದೇಶಕರು ನೀಡಿದ ವರದಿ ನಿ.ಪಿ.9 ಎಂದು ಗುರುತಿಸಲಾಯಿತು, ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, ದಿಃ 27.02.2020 ರಂದು ಭೂ ದಾಖಲೆ ಸಹಾಯಕ ನಿರ್ದೇಶಕರು ನೀಡಿದ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ಭೂ ದಾಖಲೆ ಸಹಾಯಕ ನಿರ್ದೇಶಕರು ನೀಡಿದ ನಕ್ಷೆಯ ದೃಢೀಕೃತ ನಕಲನ್ನು

ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 21.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಹೆಚ್.ಎಸ್ ವಕೀಲರಿಂದ ವಾದಿ ಪರವಾಗಿ

3. ಸರ್ವೋಚ್ಚ ನ್ಯಾಯಾಲಯದ Spl. Leave Petition ನ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದು 3 ನೇ ಪ್ರತಿವಾದಿಯ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ.13 ಎಂದು ಗುರುತಿಸಲಾಯಿತು.
4. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ **1** ಮತ್ತು **2** ನೇ ಪ್ರತಿವಾದಿ ಪರವಾಗಿ

5. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ನೀಡಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ **3** ನೇ ಪ್ರತಿವಾದಿ ಪರವಾಗಿ

6. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ನೀಡಲಾಯಿತು..

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 07.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ **1** ಮತ್ತು **2** ನೇ ಪ್ರತಿವಾದಿ ಪರವಾಗಿ

7. ದಾವ ಆಸ್ತಿಯನ್ನು ನ್ಯಾಯಾಲಯದಿಂದ ಕ್ರಯ ಪತ್ರದಲ್ಲಿ ಪಡೆದುಕೊಂಡಿರುತ್ತೇನೆ. ದಾವ ಆಸ್ತಿಯನ್ನು ನ್ಯಾಯಾಲಯವು Oliver Wilfred Coelho ರವರ ಹೆಸರಿನಲ್ಲಿ ಕ್ರಯ ಪತ್ರ ಬರೆದುಕೊಟ್ಟಿರುತ್ತದೆ. ನಾನು ದಾವ ಆಸ್ತಿಗೆ ಸಂಬಂಧಪಟ್ಟಂತೆ Oliver Wilfred Coelho ರವರ ಜೊತೆ ಕರಾರು ಪತ್ರ ಮಾಡಿಕೊಂಡಿರುತ್ತೇನೆ. ಸದರಿ ಕರಾರು ಪತ್ರದಲ್ಲಿ ಆಸ್ತಿಯ ಗಡಿ ಗುರುತನ್ನು ಬರೆದಿತ್ತು. ದಾವ ಆಸ್ತಿಯ ಚಕ್ಕುಬಂದಿಯನ್ನು ಕರಡು ಪತ್ರದಲ್ಲಿ ನಾನೇ ಹೇಳಿ ಬರೆಸಿರುತ್ತೇನೆ. ನನಗೆ Oliver Wilfred Coelho ರವರನ್ನು ಮಂಜುನಾಥ ರವರು ಪರಿಚಯ ಮಾಡಿಕೊಟ್ಟಿರುತ್ತಾರೆ. ಕರಾರು ಪತ್ರ ಆಗುವ ಮೊದಲು ನಾನು ದಾವ ಆಸ್ತಿಯನ್ನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆಸ್ತಿಯನ್ನು ನೋಡಿ ನಂತರ ಮಾತುಕತೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕರಡು ಕ್ರಯ ಪತ್ರದಲ್ಲಿ ಇರುವ ಚಕ್ಕುಬಂದಿಯನ್ನು ಕರಾರು ಪತ್ರದಂತೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಉತ್ತರ ಮತ್ತು ದಕ್ಷಿಣದ ಗಡಿ ಗುರುತುಗಳು ಕರಡು ಕ್ರಯ ಪತ್ರ ಮತ್ತು ಕರಾರು ಪತ್ರದಲ್ಲಿ ತಪ್ಪಾಗಿ ನಮೂದಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಟಿಂಬರ್ ವ್ಯಾಪಾರಿಯಾಗಿರುತ್ತೇನೆ ಎಂದರೆ ಸರಿ. ಯಾವುದೇ ಆಸ್ತಿಯಲ್ಲಿ ಮರವನ್ನು ಖರೀದಿ ಮಾಡುವ ಮೊದಲು ಸಂಬಂಧಪಟ್ಟ ನಕ್ಷೆಯನ್ನು ನೋಡುತ್ತೇನೆ ಎಂದರೆ ಸರಿ. ಆಸ್ತಿಯು ಪಕ್ಕಾ ಪೊಡಿಯಾಗದಿದ್ದರೆ ಮರ ಕಡಿತಲೆ ಮಾಡಲು ಪರವಾನಿಗೆ ಸಿಗುವುದಿಲ್ಲ ಎಂದರೆ ಸರಿ. ಯಾವುದೇ ಆಸ್ತಿಯುು ಪಕ್ಕಾ ಪೋಡಿಯಾಗಿರದಿದ್ದರೆ ನೊಂದಾವಣಿ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ದಾವ ಆಸ್ತಿಯನ್ನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ದಾವ ಆಸ್ತಿಯು ಪಕ್ಕಾ ಪೋಡಿಯಾಗಿರಲಿಲ್ಲ. ಪಕ್ಕಾ ಪೋಡಿಯಾಗಿರುವ ಸರ್ವೆ ನಂಬರ್ ಗೆ ಪ್ರತ್ಯೇಕ ಪಕ್ಕಾ ಪೋಡಿ ನಕ್ಷೆ ಇರುತ್ತದೆ ಎಂದರೆ ಸರಿ. ಯಾವುದೇ ಜಮೀನಿನ ಗಡಿ ಗುರುತು ಪಕ್ಕಾ ಪೋಡಿ ನಕ್ಷೆಯಂತೆ ಇರುತ್ತದೆ ಎಂದರೆ ಸರಿ. ಕ್ರಯ ಪತ್ರವನ್ನು ನೊಂದಾವಣಿ

ಮಾಡುವ ಸಮಯದಲ್ಲಿ ದಾವ ಆಸ್ತಿಯ ಗಡಿ ಗುರುತು ತಪ್ಪಾಗಿರುವುದು ಕಂಡು ಬಂದಿರುತ್ತದೆ. ನೊಂದಾವಣಿ ಸಮಯದಲ್ಲಿ ಸದರಿ ಆಸ್ತಿಯ ಗಡಿ ಗುರುತನ್ನು ಸರಿಪಡಿಸಲು ನಾನು ಪ್ರಯತ್ನಪಟ್ಟಿರುವುದಿಲ್ಲ. ನಾನು ದಾವ ಆಸ್ತಿಯ ಗಡಿ ಗುರುತಿಗೆ ಸಂಬಂಧಪಟ್ಟಂತೆ ನಾನು ಯಾವುದೇ ತಿದ್ದುಪಡಿ ಪತ್ರವನ್ನು ನೊಂದಾವಣಿ ಕಚೇರಿಗೆ ಹಾಜರು ಮಾಡಿರುವುದಿಲ್ಲ. ನ್ಯಾಯಾಲಯದಿಂದ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ಗಡಿ ಗುರುತು ತಪ್ಪಾಗಿರುವ ಬಗ್ಗೆ ಸದರಿ ಗಡಿ ಗುರುತನ್ನು ಸರಿ ಪಡಿಸುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ಯಾವಾಗ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ.

8. ನಾನು Oliver Wilfred Coelho ರವರಿಗೆ ಗಡಿ ಗುರುತು ತಪ್ಪಾಗಿರುವ ಬಗ್ಗೆ ಸರಿ ಪಡಿಸಿಕೊಡುವಂತೆ ಯಾವುದೇ ನೋಟೀಸು ನೀಡಿರುವುದಿಲ್ಲ. ಈ ದಾವೆಯಲ್ಲಿ ನಾನು Oliver Wilfred Coelho ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. Oliver Wilfred Coelho ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. Oliver Wilfred Coelho ರವರಿಗೆ ತಪ್ಪು ಮಾಹಿತಿಯನ್ನು ನೀಡಿ ನಾನು ಕ್ರಯದ ಕರಾರು ಪತ್ರವನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. Oliver Wilfred Coelho ರವರ ಒಪ್ಪಿಗೆ ಇಲ್ಲದೆ ನಾನೇ ಕ್ರಯದ ಕರಾರು ಪತ್ರವನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. Oliver Wilfred Coelho ರವರೇ ಸದರಿ ಕ್ರಯದ ಕರಾರು ಪತ್ರವನ್ನು ತಯಾರಿಸುತ್ತಿದ್ದರೆ ಗಡಿ ಗುರುತಿನಲ್ಲಿ ತಪ್ಪು ಆಗುತ್ತಿರಲಿಲ್ಲ ನಾನೇ ಸದರಿ ಕರಾರು ಪತ್ರವನ್ನು ತಯಾರು ಮಾಡಿರುವುದರಿಂದ ಗಡಿ ಗುರುತಿನಲ್ಲಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. Oliver Wilfred Coelho ರವರು 5-6 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. Oliver Wilfred Coelho ರವರ ಪತ್ನಿಯು ಸುಮಾರು 9 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. Oliver Wilfred Coelho ರವರಿಗೆ ಮಕ್ಕಳು ಇರುತ್ತಾರೆ. Oliver Wilfred Coelho ರವರ ಮಕ್ಕಳನ್ನು ನಾನು ದಾವೆಯಲ್ಲಿ ಪಕ್ಷಗಾರರನ್ನಾಗಿ

ಮಾಡಿರುವುದಿಲ್ಲ. ಕರಾರು ಪತ್ರವನ್ನು ನಾನು ಬರೆದುಕೊಟ್ಟಿರುವುದಿಲ್ಲ ಎಂದು Oliver Wilfred Coelho ರವರು ಪ್ರತಿಪಾದನೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಪ್ರತಿಪಾದನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ ಆಗಿರುವ ಗಡಿ ಗುರುತಿನ ತಪ್ಪನ್ನು ಸರಿ ಪಡಿಸಲು ನನಗೆ ಕ್ರಯ ಪತ್ರ ಬರೆದುಕೊಟ್ಟಿರುವ ಮಾರಾಟಗಾರರೇ ಸರಿ ಪಡಿಸಬೇಕಾಗಿರುತ್ತದೆ. ವಿನಾಕಾರಣ ನಾನು ಪ್ರತಿವಾದಿಗಳ ವಿರುದ್ಧ ಸದರಿ ಪರಿಹಾರವನ್ನು ಕೇಳಿರುತ್ತೇನೆ ಎಂದರೆ ಸಾಕ್ಷಿಯು ನಾನು ನ್ಯಾಯಾಲಯದ ಮಾಲಕವೇ ಕೇಳಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಸದರಿ ಗಡಿ ಗುರುತನ್ನು ಸರಿಪಡಿಸಲು ಪರಿಹಾರವನ್ನು ಪ್ರತಿವಾದಿಗಳ ವಿರುದ್ಧ ಕೋರಿರುತ್ತೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಆಗಿರುವ ಗಡಿ ಗುರುತನ್ನು ಸರಿಪಡಿಸಲು ನನ್ನ ಮಾರಾಟಗಾರರ ವಿರುದ್ಧ ಪ್ರತ್ಯೇಕ ದಾವೆಯನ್ನು ಹೂಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವ ಆಸ್ತಿಯ ಗಡಿ ಗುರುತನ್ನು ಅಳತೆ ಮಾಡಿದ ಸರ್ವೆಯರ್ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆಯನ್ನು ಸುಮಾರು 5-6 ವರ್ಷಗಳ ಹಿಂದೆ ಮಾಡಿಸಿರುತ್ತೇನೆ. ಸರ್ವೆ ಮಾಡಿಸಿದ ಬಗ್ಗೆ ನನ್ನ ಬಳಿ ನಕ್ಷೆ ಇರುವುದಿಲ್ಲ. ದಾವ ಆಸ್ತಿಯನ್ನು ನಾನು ಅಳತೆ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. RSA.1639/2013 ರಲ್ಲಿ ಯಾರು ಪಕ್ಷಗಾರರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ಮೇಲ್ಮನವಿಯ ವಿರುದ್ಧ ಸದರಿ RSA ದಾಖಲು ಮಾಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವ ದಾವೆಯ ವಿರುದ್ಧ RSA.1639/2013 ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. O.S.156/2001 ದಾವೆಯನ್ನು Oliver Wilfred Coelho ರವರು 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. O.S.156/2001 ನ್ನು ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ Oliver

Wilfred Coelho ರವರು ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ನಾನೇ ದಾವ ಆಸ್ತಿಯ ಮಾಲೀಕರು ಮತ್ತು ಒತ್ತುವರಿಯನ್ನು ಬಿಟ್ಟುಕೊಡಬೇಕು ಎಂದು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. O.S.156/2001 ರಲ್ಲಿ Oliver Wilfred Coelho ರವರು ದಾವೆಯಲ್ಲಿ ನಮೂದು ಮಾಡಿರುವ ಗಡಿ ಗುರುತು ತಪ್ಪಾಗಿರುತ್ತದೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. O.S.156/2001 ರಲ್ಲಿ Oliver Wilfred Coelho ರವರು ಕೇಳಿರುವ ಯಾವುದೇ ಪರಿಹಾರವು ಅವರಿಗೆ ಸಿಕ್ಕಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. O.S.156/2001 ರಲ್ಲಿ ದಾವ ಆಸ್ತಿಯ ಗಡಿ ಗುರುತನ್ನು ಸರಿ ಪಡಿಸಲು ನ್ಯಾಯಾಲಯವು ಅವಕಾಶ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಾನು ಕೇಳಿರುವ ಪರಿಹಾರವನ್ನು ಈ ಮೊದಲೇ ನನ್ನ ಮಾರಾಟಗಾರರಾದ Oliver Wilfred Coelho ರವರು ಸಲ್ಲಿಸಿರುವ ದಾವೆಯಲ್ಲಿಯೇ ಪ್ರತಿಪಾದನೆ ಮಾಡಿ ವಿಫಲರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದುದರಿಂದ ನಾನು ಅದೇ ಪರಿಹಾರವನ್ನು ಈ ದಾವೆಯಲ್ಲಿ ಕೇಳಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. RSA.1639/2013 ಪ್ರಸ್ತುತ ಚಾಲ್ತಿಯಲ್ಲಿ ಇರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಿಃ 12.03.2020 ರಂದು RSA.1639/2013 ರಲ್ಲಿ ಸರ್ವೆಯಾಗಿರುವ ವಿಚಾರವು ನನಗೆ ಗೊತ್ತಾಗಿರುತ್ತದೆ. ಯಾವ ಉದ್ದೇಶಕ್ಕಾಗಿ ಸದರಿ ಸರ್ವೆಯಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸರ್ವೆ ಮಾಡುವ ಬಗ್ಗೆ ನನಗೆ ಉಚ್ಚ ನ್ಯಾಯಾಲಯದಿಂದ ಯಾವುದೇ ನೋಟೀಸು ಬಂದಿರುವುದಿಲ್ಲ. ಸದರಿ ಸರ್ವೆಯ ಬಗ್ಗೆ ನನಗೆ ಯಾವುದೇ ಸರ್ವೆ ನೋಟೀಸು ಬಂದಿರುವುದಿಲ್ಲ.

10. ದಿಃ 12.03.2020 ರ ಸರ್ವೆ ಸ್ಕೆಚ್ ನ್ನು ನಾನು ತಾಲ್ಲೂಕು ಕಚೇರಿಯಿಂದ ಪಡೆದಿರುತ್ತೇನೆ. ಯಾವ ದಿನಾಂಕ ಪಡೆದಿರುತ್ತೇನೆ ಎಂದು ನನಗೆ ನೆನಪಿಲ್ಲ. ಸದರಿ ಸರ್ವೆ ಸ್ಕೆಚ್ ನ ಬಗ್ಗೆ ಉಚ್ಚ ನ್ಯಾಯಾಲಯವು ಏನು ತೀರ್ಮಾನ ತೆಗೆದುಕೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಜಾಗವು ಒತ್ತುವರಿಯಾಗಿರುವ ಆಧಾರದ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇನೆ.

ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತು ಯಾವ ಉದ್ದೇಶಕ್ಕಾಗಿ ಸರ್ವೆ ಮಾಡಲು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಉಚ್ಚ ನ್ಯಾಯಾಲಯದಲ್ಲಿ ಇರುವ RSA.1639/2013 ಪ್ರಕರಣದಲ್ಲಿ ನಾನು ಪಕ್ಷಗಾರನಾಗಬೇಕು ಎಂದು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಒತ್ತುವರಿ ಮಾಡಿರುವ ನನ್ನ ಆಸ್ತಿಯನ್ನು ಬಿಟ್ಟುಕೊಡುವಂತೆ ನಾನು ಈ ದಾವೆಯಲ್ಲಿ ಪರಿಹಾರವನ್ನು ಕೇಳಿರುತ್ತೇನೆ. 2-3 ವರ್ಷಗಳ ಹಿಂದೆ ನನ್ನ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ. ನಿಖರವಾಗಿ ಯಾವ ದಿನಾಂಕದಂದು ಒತ್ತುವರಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನನ್ನ ಹೆಸರಿಗೆ ಕ್ರಯ ಪತ್ರ ಆದ ನಂತರ ನಾನು ದಾವ ಆಸ್ತಿಯನ್ನು ಸಾಧೀನ ಪಡೆದುಕೊಂಡಿರುತ್ತೇನೆ. ಒತ್ತುವರಿಯಾಗಿರುವ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. ನನ್ನ ಆಸ್ತಿಯು ಒತ್ತುವರಿಯಾಗಿರುವ ಬಗ್ಗೆ ಅದ್ದುಬಸ್ತು ಗುರುತಿಸುವ ಬಗ್ಗೆ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಕ್ರಯ ಪತ್ರದ ಅಡಿಯಲ್ಲಿ ಬಂದಿರುವ ಸ್ವತ್ತು ನನ್ನ ಸ್ವಾಧೀನ ಇದ್ದಿರುವ ಕಾರಣ ಮತ್ತು ಯಾವುದೇ ಒತ್ತುವರಿಯಾಗದ ಕಾರಣ ನಾನು ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಒತ್ತುವರಿಯಾಗಿರುವುದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆದ ನಂತರ ಸದರಿ ಆಸ್ತಿಯನ್ನು ಕೃಷಿ ಮಾಡಿರುತ್ತೇನೆ. ನನ್ನ ಮನೆಯಿಂದ ದಾವ ಆಸ್ತಿಯು 12 ಕಿ.ಮೀ ಅಂತರದಲ್ಲಿ ಇರುತ್ತದೆ. ನಾನು ದಾವ ಆಸ್ತಿಗೆ ವಾರಕ್ಕೆ ಒಂದು ಬಾರಿ ಹೋಗುತ್ತೇನೆ. ಕ್ರಯ ಪತ್ರವನ್ನು ನನ್ನ ಮಾರಾಟಗಾರದಿಂದ ಖರೀದಿ ಮಾಡುವ ಸಮಯದಲ್ಲಿ ನನ್ನ ಮಾರಾಟಗಾರರ ಸ್ವಾಧೀನದಲ್ಲಿ ಕೇಲವ 5 ಎಕರೆ ಮಾತ್ರ ಸ್ವಾಧೀನ ಇತ್ತು ಎಂದರೆ ಸರಿಯಲ್ಲ. ನನ್ನ ಮಾರಾಟಗಾರರ ಸ್ವಾಧೀನದಲ್ಲಿ ಇದ್ದ 5 ಎಕರೆ ಮಾತ್ರ ನನ್ನ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

<u>ದಿನಾಂಕಃ 10-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>
<u>ಮುಂದುವರೆದ ಪಾಟೀ ಸವಾಲುಃ ಶ್ರೀ ಕೆಎಸ್ ಎ ವಕೀಲರಿಂದಃ</u>

11. ನಿಪಿ-8 ದಾಖಲೆಯಲ್ಲಿ ಆಸ್ತಿಗಳ ಚೆಕ್ಕು ಬಂದಿಯನ್ನು ದಾವಾ ಎ ಶೆಡ್ಯೂಲ್ ಆಸ್ತಿಯ ಚೆಕ್ಕು ಬಂದಿಯನ್ನು ಒಂದೇ ಕಡೆ ತೋರಿಸಿರುತ್ತದೆ ಎಂದರೆ ಸರಿ. ನಿಪಿ-12 ರಲ್ಲಿ ಒಟ್ಟು 4 ಬ್ಲಾಕ್ ಗಳಲ್ಲಿ ದಾವಾ ಆಸ್ತಿಯನ್ನು ತೋರಿಸಿರುತ್ತದೆ ಎಂದರೆ ಸರಿ. ಉಚ್ಚ ನ್ಯಾಯಾಲಯದ ಆದೇಶದಂತೆ ಸರ್ವೆಗೆ ಬಂದಿರುವ ಬಗ್ಗೆ ನನ್ನ ತೋಟದ ಕೂಲಿ ಆಳುಗಳು ತಿಳಿಸಿರುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ನಾನು ಅರ್ಜಿ ಸಲ್ಲಿಸಿದಾಗ ನನಗೆ ನಿಪಿ-12 ಸ್ಕೆಚನ್ನು ನೀಡಿರುತ್ತಾರೆ. ನಿಪಿ-9 ರ ಪ್ರಕಾರ ದಾಖಲೆಗಳನ್ನು ಉಚ್ಚ ನ್ಯಾಯಾಲಯಕ್ಕೆ ಕಳುಹಿಸಲಾಗಿರುತ್ತದೆ ಎಂದು ನನಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ವೆ ಆದ ನಂತರ ನಾನು ನಿಪಿ-10 ದಾಖಲೆಯನ್ನು ಸುಮಾರು ಅಂದಾಜು ಎರಡು ವಾರದಲ್ಲಿ ಪಡೆದುಕೊಂಡಿರುತ್ತೇನೆ. ಸದರಿ ಸರ್ವೆ ಆಗುವ ದಿನ ನಾನು ಊರಿನಲ್ಲಿ ಇರಲಿಲ್ಲ. ಸರ್ವೆಯಾದ 3 ದಿನಗಳ ನಂತರ ನಾನು ಊರಿಗೆ ಬಂದಿರುತ್ತೇನೆ. ನಿಪಿ-9 ರಿಂದ 12 ದಾಖಲೆಯನ್ನು ನಾನು ಭೂ ದಾಖಲೆಗಳ ಸಾಹಯಕ ನಿರ್ದೇಶಕರೊಂದಿಗೆ ಶಾಮೀಲಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-12 ನಕ್ಷೆಯನ್ನು ಹೊರತುಪಡಿಸಿ ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ತೋರಿಸಲು ನನ್ನ ಬಳಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಮಾರಾಟಗಾರರಾದ ವಾಲೀವರ್ Wilfred Coelho ರವರಿಗೆ ಅವರ ತಾಯಿಯಿಂದ ವೀಲು ನಾಮೆಯ ಮೂಲಕ ಬಂದಿರುತ್ತದೆ. ಅವರ ತಾಯಿಗೆ ದಾವಾ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

12. ದಾವಾ ಆಸ್ತಿಗೆ ಸಂಬಂದಪಟ್ಟಂತೆ ನಾನು ಮಂಜೂರಾತಿ ನಕ್ಷೆಯನ್ನು ಪಡೆದುಕೊಂಡಿಲ್ಲ. ವಾಲೀವರ್ Wilfred Coelho ರವರ ತಾಯಿಯ ವೀಲು ನಾಮೆಯ ಪ್ರತಿಯು ನನ್ನ ಬಳಿ ಇರುತ್ತದೆ. ಸದರಿ ವೀಲು ನಾವೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ಅಂಬ್ಯತರ ಇಲ್ಲ. ಸದರಿ ವೀಲು ನಾವೆಯನ್ನು ನಾನು ಓದಿಸಿ ತಿಳಿದಕೊಂಡಿರುತ್ತೇನೆ. ವೀಲು ನಾವೆಯಲ್ಲಿ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಯಾವುದೇ ದಾಖಲೆಯನ್ನು ತಯಾರು ಮಾಡುವಾಗ ಆಸ್ತಿಯು ತನಗೆ ಹೇಗೆ ಬಂದಿರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. Oliver Wilfred Coelho ರವರ ತಾಯಿಗೆ ಆಸ್ತಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನನಗೆ ಊರಿನ ಜನರು

ತಿಳಿಸಿರುತ್ತಾರೆ. ವೀಲು ನಾಮೆಯಲ್ಲಿ ಆಸ್ತಿಯ ಚೆಕ್ಕು ಬಂದಿಯನ್ನು ನಮೂದು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

13. ದಾವಾ ಆಸ್ತಿಯನ್ನು ಪ್ರತಿವಾದಿ ಒತ್ತುವರಿ ಮಾಡಿರುವ ಬಗ್ಗೆ ನಾನು ಪ್ರತಿವಾದಿಗಳಿಗೆ ನೋಟೀಸ್ ನೀಡಿರುವುದಿಲ್ಲ. ಪ್ರತಿವಾದಿಗಳ ಬಳಿ ಒತ್ತುವರಿಯನ್ನು ತೆರವು ಮಾಡುವಂತೆ ನಾನು ಕೇಳಿರುವುದಿಲ್ಲ. ದಿನಾಂಕ 12-03-2020 ರಂದು ಸರ್ವೆ ಮಾಡಿದ ಸಮಯದಲ್ಲಿ ನನಗೆ ಸೇರಿದ ಆಸ್ತಿಯು ಒತ್ತುವರಿಯಾಗಿರುವುದು ನನಗೆ ಪ್ರಥಮ ಬಾರಿಗೆ ತಿಳಿದು ಬಂದಿರುತ್ತದೆ. ದಿನಾಂಕ 12-03-2020 ರ ಪೂರ್ವದಲ್ಲಿ ನಾನಾಗಲೀ ನನ್ನ ಮಾರಾಟಗಾರರಾಗಲೀ ದಾವಾ ಆಸ್ತಿಯನ್ನು ಸರ್ವೆ ಮಾಡಿಸಿರುವುದಿಲ್ಲ. ಅದೇ ರೀತಿ ಸರ್ವೆ ಮಾಡುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ಸ್ಕೆಚ್ಚನ್ನು ಸಹ ನಾನು ನೋಡಿರುವುದಿಲ್ಲ. ಯಾವುದೇ ಜಮೀನಿನ ಅಸ್ತಿತ್ವದ ಬಗ್ಗೆ ಸರ್ವೆ ನಕ್ಷೆಯು ಅಗತ್ಯ ಇರುತ್ತದೆ ಎಂದರೆ ಸರಿ. ಸರ್ವೆ ನಂ 202 ರಲ್ಲಿ ಒಟ್ಟು 30-40 ಎಕರೆ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂ. 202 ಇಂದಿಗೂ ದುರಸ್ತಿ ಆಗಿರುವುದಿಲ್ಲ ಎಂದರೆ ಸರಿ. ಸರ್ವೆ ನಂ. 202 ರಲ್ಲಿ ಅರಣ್ಯ ಇಲಾಖೆಯು ಸ್ವಲ್ಪ ಜಾಗವನ್ನು ಸ್ವಾಧೀನ ಹೊಂದಿರುತ್ತದೆ ಎಂದರೆ ಸರಿಯಲ್ಲ.

14. ನಾನು ಕರಾರು ಪತ್ರ, ಕ್ರಯ ಪತ್ರ ಮತ್ತು ನ್ಯಾಯಾಲಯದಿಂದ ಸ್ವತ್ತನ್ನು ಸ್ವಾದೀನ ಪಡೆದುಕೊಳ್ಳುವ ಸಮಯದಲ್ಲಿ ದಾವಾ ಆಸ್ತಿಯ ನಕ್ಷೆಯನ್ನು ನೋಡಿರುವುದಿಲ್ಲ. ಸದರಿ 3 ಸಂದರ್ಭಗಳಲ್ಲೂ ನಾನು ಅಳತೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. Lilly D Silva ರವರಿಗೆ ದಾವಾ ಆಸ್ತಿಯ ಖಾತೆಯು ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. Lilly D Silva ರವರಿಗೆ ಯಾವ ರೀತಿ ಖಾತಾ ಮ್ಯುಟೇಷನ್ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 202 ರಲ್ಲಿ Lilly D Soza ರವರ ಪೂರ್ವಿಕರಿಗೆ ಜಮೀನು ಮಂಜೂರಾಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಮಂಜೂರಾದ ನಂತರವು Lilly D Soza ರವರ ಪೂರ್ವಿಕರು ಸದರಿ ಜಮೀನನ್ನು ಸ್ವಾಧೀನ ಹೊಂದದ ಕಾರಣ ಮತ್ತು ಕಂದಾಯ ಪಾವತಿ ಮಾಡದ ಕಾರಣ ವಾಪಸ್ಸು ಸರ್ಕಾರದ ಸ್ವಾಧೀನಕ್ಕೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಗೆ ಸರ್ವೆ ನಂ. 202 ರಲ್ಲಿ ಯಾವುದೇ ಸ್ವತ್ತು ಇರುವುದಿಲ್ಲ. ಆದರೆ ಬೇರೆ ಸರ್ವೆ ನಂ. ರಲ್ಲಿ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂ. 261 ಮತ್ತು 249 ರಲ್ಲಿ ಆಸ್ತಿ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

15. ದಾವಾ ಆಸ್ತಿಯ ಪಕ್ಕದಲ್ಲಿಯೇ ಒಂದನೇ ಪ್ರತಿವಾದಿಯ ಹಿಡುವಳಿ ಆಸ್ತಿ ಇರುತ್ತದೆ.

ಒಂದನೇ ಪ್ರತಿವಾದಿಯು ಅವರಿಗೆ ಸೇರಿದ ಆಸ್ತಿಯನ್ನು ಖರೀದಿ ಮಾಡಿರುವ ಆಸ್ತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಎದುರುದಾರರ ಮಾರಾಟಗಾರರ ಸರ್ವೆ ನಂ. 261 ಮತ್ತು 249 ರ ಜೊತೆಗೆ ಸರ್ವೆ ನಂ. 202 ರ ಸರ್ಕಾರಿ ಜಮೀನನ್ನು ಸ್ವಾಧೀನ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಗೆ ಸರ್ವೆ ನಂ. 261 ಮತ್ತು 249 ರ ಲ್ಲಿ ಇರುವ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ಅವರ ಮಾರಾಟಗಾರು ಸರ್ವೆ ನಂ. 202 ರಲ್ಲಿ 3 ಎಕರೆ 24 ಗುಂಟೆ ಸರ್ಕಾರಿ ಆಸ್ತಿಯನ್ನು ಒಂದನೇ ಪ್ರತಿವಾದಿಯ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ದಿನದಿಂದ ಒಂದನೇ ಪ್ರತಿವಾದಿಯು ಸರ್ವೆ ನಂ. 261, 249 ಮತ್ತು ಸರ್ವೆ ನಂ 202 ರಲ್ಲಿ ಇರುವ 3 ಎಕರೆ 24 ಗುಂಟೆ ಸರ್ಕಾರಿ ಜಮೀನಿಗೆ ಒಂದೇ ಬೇಲಿ ಒಳಗೆ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯು ಮೇಲೆ ಹೇಳಿದ ಸರ್ವೆ ನಂ 202 ರಲ್ಲಿ 3 ಎಕರೆ 24 ಗುಂಟೆ ಸರ್ಕಾರಿ ಜಮೀನಿನ ಜೊತೆಗೆ ಸದರಿ ಸರ್ಕಾರಿ ಜಮೀನಿನಲ್ಲಿ ಹೆಚ್ಚುವರಿಯಾಗಿ 1 ಎಕರೆ 14 ಗುಂಟೆ ಆಸ್ತಿಯನ್ನು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯು ಸ್ವಾಧೀನ ಹೊಂದಿದ್ದ ಸರ್ವೆ ನಂ. 202 ರಲ್ಲಿ 4 ಎಕರೆ 38 ಗುಂಟೆ ಆಸ್ತಿಯು ಅವರ ಪತ್ನಿ ಒಂದನೇ ಪ್ರತಿವಾದಿ ಪತ್ನಿಯ ಹೆಸರಿಗೆ ಸಾಗುವಳಿ ಚೀಟಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಒಂದನೇ ಪ್ರತಿವಾದಿಯು ನಕ್ಷೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸರ್ವೆ ನಂ. 202 ರಲ್ಲಿ ಒಟ್ಟು 4 ಎಕರೆ ಸರ್ಕಾರಿ ಜಮೀನನ್ನು ಸ್ವಾಧೀನ ಹೊಂದಿದ್ದರು ಎಂದರೆ ಸಾಕ್ಷಿಯು 2 ಎಕರೆ 30 ಗುಂಟೆ ಆಸ್ತಿಯನ್ನು ಸರ್ವೆ ನಂ. 202 ರಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

16. 2 ನೇ ಪ್ರತಿವಾದಿಯು ಸ್ವಾಧೀನ ಹೊಂದಿರುವ 4 ಎಕರೆ ಸರ್ಕಾರಿ ಜಮೀನಲ್ಲಿ 2 ಎಕರೆ 30 ಗುಂಟೆ ಆಸ್ತಿಯು 2 ನೇ ಪ್ರತಿವಾದಿಗೆ ಮಂಜೂರಾಗಿ ಸಾಗುವಳಿ ಚೀಟಿ ಸಿಕ್ಕಿರುತ್ತದೆ ಎಂದರೆ ಸರಿ. ಉಳಿಕೆ 1 ಎಕರೆ 10 ಗುಂಟೆಗೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಂಜೂರಾತಿ ಪ್ರಕ್ರಿಯೆ ಚಾಲ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂ. 202 ರಲ್ಲಿ ಜಮೀನು ಮಂಜೂರಾತಿ ಮಾಡಬಾರದು ಎಂದು Oliver Wilfred Coelho ರವರು ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. Oliver Wilfred Coelho ರವರ ತಕಾರಾರು ಇದ್ದರೂ ಸಹ ತಕರಾರನ್ನು ತಳ್ಳಿ ಹಾಕಿ 2 ನೇ ಪ್ರತಿವಾದಿಗೆ ಸರ್ವೆ ನಂ. 202 ರಲ್ಲಿ ಜಮೀನು ಮಂಜೂರಾತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. Lilly D Silver ರವರು ಸರ್ವೆ ನಂ. 202 ರಲ್ಲಿ ಯಾವುದೇ ಸರ್ಕಾರಿ ಜಮೀನನ್ನು ಸ್ವಾಧೀನ ಹೊಂದಿರದೇ ಇದ್ದರೂ ಸಹ ಸದರಿ ಸರ್ವೆ

ನಂ. 202 ರಲ್ಲಿ ಇರುವ ಆಸ್ತಿಯನ್ನು ತನ್ನ ಹೆಸರಿಗೆ ಪುನರ್ ಸ್ಥಾಪನೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಯಾವುದೇ ವ್ಯಕ್ತಿಯ ಹೆಸರಿಗೆ ಆಸ್ತಿಯನ್ನು ಪುನರ್ ಸ್ಥಾಪನೆ ಮಾಡಿಕೊಡಬೇಕಾದರೆ ಅಂತಹ ವ್ಯಕ್ತಿಯು ಆಸ್ತಿಯ ಸ್ವಾಧೀನ ಹೊಂದಿರಬೇಕು ಎನ್ನುವ ವಿಚಾರ ನನಗೆ ಗೊತ್ತಿಲ್ಲ.

17. Lilly D Silver ರವರು ಸರ್ವೆ ನಂ. 202 ರಲ್ಲಿ ಯಾವುದೇ ಸರ್ಕಾರಿ ಜಮೀನನ್ನು ಸ್ವಾಧೀನ ಹೊಂದಿರದೇ ಇದ್ದ ಕಾರಣ ಮತ್ತು ಸದರಿ ಜಮೀನು ಎಲ್ಲಿ ಇರುತ್ತದೆ ಎಂದು ಅವರಿಗೆ ಗೊತ್ತಿರದ ಕಾರಣ 2 ಬಾರಿ ಜಿಲ್ಲಾಧಿಕಾರಿಗಳು ಅವರ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. Lilly D Silver ರವರು ಕೆ. ಎ. ಟಿ. ಯಲ್ಲಿ ಮೇಲ್ಮನವಿ ಸಲ್ಲಿಸಿ ತನ್ನ ಅರ್ಜಿಯನ್ನು ಮರುಪರಿಶೀಲಿಸಬೇಕೆಂದು ಕೋರಿ, ಮರುಪರಿಶೀಲಿಸುವಂತೆ ಆದೇಶವನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. Lilly D Silver ರವರು ಸ್ಥಳೀಯ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸರ್ವೆ ನಂ. 202 ರಲ್ಲಿ 8 ಎಕರೆ 10 ಗುಂಟೆಯಲ್ಲಿ ನಾನೇ ಸ್ವಾಧೀನ ಇರುತ್ತೇನೆ ಎಂದು ದಾಖಲೆಯನ್ನು ಸೃಷ್ಟಿಸಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ವರದಿಯಲ್ಲಿ ಸ್ಥಳೀಯ ಕಂದಾಯ ಅಧಿಕಾರಿಗಳು ಸದರಿ 8 ಎಕರೆ 10 ಗುಂಟೆಯ ನಕ್ಷೆಯನ್ನು ಸಲ್ಲಿಸಿರುವುದಿಲ್ಲ ಮತ್ತು ಚೆಕ್ಕು ಬಂದಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

18. ತಪ್ಪು ವರದಿ ಆದಾರದ ಮೇಲೆ Lilly D Silver ರವರು ಸರ್ವೆ ನಂ. 202 ರಲ್ಲಿ 8 ಎಕರೆ 10 ಗುಂಟೆಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 202 ರಲ್ಲಿ 8 ಎಕರೆ 10 ಗುಂಟೆ ಆಸ್ತಿಗೆ ಪ್ರತಿವಾದಿಗಳು ತೊಂದರೆ ನೀಡುತ್ತಾರೆ ಎಂದು ಮತ್ತು Lilly D Silver ರವರು ಸದರಿ ಆಸ್ತಿಯ ಮಾಲೀಕರು ಎಂದು Oliver Wilfred Coelho ರವರ ಮೂಲಕ ಚಿಕ್ಕಮಗಳೂರು ನ್ಯಾಯಾಲಯದಲ್ಲಿ O.S 156/2001 ರಂತೆ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು Lilly D Silver ರವರ ಮರಣ ನಂತರ Oliver Wilfred Coelho ರವರು ಮುಂದುವರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

19. ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ಮತ್ತು ವಿಸ್ತೀರ್ಣ ವನ್ನು ಮೂಲ ದಾವಾ ಸಂಖ್ಯೆ 156/2001 ರ ದಾವೆಯಲ್ಲೂ ಸಹ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವಾ ಸಂಖ್ಯೆ 156/2001 ರಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಬೇಕು ಎಂದು ಆದೇಶ

ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವಾ ಸಂಖ್ಯೆ 156/2001 ರ ಅಳತೆ ಮಾಡುವ ಸಮಯದಲ್ಲಿ Oliver Wilfred Coelho ರವರು ದಾವಾ ಚೆಕ್ಕು ಬಂದಿಯಲ್ಲಿ ತೋರಿಸಿರುವ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಎಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಮೂಲತಃ ದಾವಾ ಸಂಖ್ಯೆ 156/2001 ದಾವೆಯು ಘೋಷಣ ಮತ್ತು ನಿರ್ಬಂದಕಜ್ಞೆಯನ್ನು ಕೋರಿರುವ ದಾವೆಯಾಗಿದ್ದು ನ್ಯಾಯಾಲಯದ ಆಯುಕ್ತರ ವರದಿಯ ನಂತರ ಸದರಿ ದಾವೆಯಲ್ಲಿ ಸ್ವಾಧೀನ ಕೋರುವ ದಾವೆಯಾಗಿ ತಿದ್ದುಪಡಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸಂಖ್ಯೆ 156/2001 ದಾವೆಯಲ್ಲಿ Oliver Wilfred Coelho ರವರು ಸದರಿ ದಾವೆಯಲ್ಲಿ ನಮೂದು ಮಾಡಿರುವ ಆಸ್ತಿಯ ಮಾಲೀಕರು ಅಲ್ಲ ಮತ್ತು ಸ್ವಾಧೀನಕ್ಕೂ ಅರ್ಹರಲ್ಲ ಎಂದು ತೀರ್ಮಾನ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

20. ದಾವಾ ಸಂಖ್ಯೆ 156/2001 ರಲ್ಲಿ ಪ್ರತಿವಾದಿಗಳು ಸರ್ವೆ ನಂ. 202 ರಲ್ಲಿ ಹೆಚ್ಚುವರಿ ಜಮೀನನ್ನು ಸ್ವಾಧೀನ ಹೊಂದಿದ್ದರೂ ಸಹ ಸದರಿ ಜಮೀನು ವಾದಿಗೆ ಸೇರಿದ ಜಮೀನು ಅಲ್ಲ ಎಂದು ತೀರ್ಮಾನಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸಂಖ್ಯೆ 156/2001 ದಾವೆಯು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 156/2001 ರ ತೀರ್ಪಿನ ವಿರುದ್ಧ RSA 1639/2013 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಚ್ಚ ನ್ಯಾಯಾಲಯದಲ್ಲಿ ಸರ್ವೆ ನಂ. 202 ರಲ್ಲಿ ಯಾರು ಯಾರು ಜಮೀನು ಸ್ವಾಧೀನ ಹೊಂದಿರುತ್ತಾರೆ ಎಂದು ಸರ್ವೆ ಮಾಡಬೇಕೆಂದು ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉಚ್ಚ ನ್ಯಾಯಾಲಯದ ಆದೇಶದಂತೆ ಅಳತೆಯಾದ ಸಮಯದಲ್ಲಿ ಯಾರ ಜಮೀನಿನಲ್ಲಿ ಯಾರು ಸ್ವಾಧೀನ ಇರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 202 ರಲ್ಲಿ ಯಾರು ಯಾರು ಎಷ್ಟು ವಿಸ್ತೀರ್ಣದಲ್ಲಿ ಸ್ವಾದೀನ ಇದ್ದಾರೆ ಎಂದು ನಿಪಿ-12 ನಕ್ಷೆಯಲ್ಲಿ ನಮೂದು ಆಗಿರುತ್ತದೆ ಆದರೆ ಯಾರು ಒತ್ತುವರಿ ಮಾಡಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದು ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

21. ನಿಪಿ-12 ದಾಖಲೆಯನ್ನು ಪಡೆಯುವ ಸಮಯದಲ್ಕಿಲ್ಲ Lilly D Silver ರವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎನ್ನುವ ಬಗ್ಗೆ ನಾನು ಕೇಳಿರುವುದಿಲ್ಲ. ನಿಪಿ-12 ದಾಖಲೆಯನ್ನು ಯಾವ ದಾಖಲೆಯ ಆದಾರದಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-12 ದಾಖಲೆಯನ್ನು ಯಾವ ದಾಖಲೆಯ ಆದಾರದಲ್ಲಿ ತಯಾರು ಮಾಡಿರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-12 ದಾಖಲೆಯನ್ನು ಉಚ್ಚ ನ್ಯಾಯಾಲಯವು ತಿರಸ್ಕರಿಸಿರುತ್ತದೋ ಅಥವಾ ಪುರಸ್ಕರಿಸಿರುತ್ತದೋ ನನಗೆ ಗೊತ್ತಿಲ್ಲ. ನಿಪಿ-12 ದಾಖಲೆಯು

ಬಂದ ನಂತರ Oliver Wilfred Coelho ರವರು ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಮುಂದುವರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-12 ನಕ್ಷೆಯ ಆದಾರದ ಮೇಲೆ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

22. ಮೂಲ ದಾವಾ ಸಂಖ್ಯೆ 156/2001 ಮತ್ತು ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುವ ಮೇಲ್ಮನವಿ ಮತ್ತು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ತಯಾರಾಗಿರುವ ನಕ್ಷೆಯ ಬಗ್ಗೆ ಎಲ್ಲಾ ವಿಚಾರಗಳು ಮತ್ತು ವಿದ್ಯಮಾನಗಳು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ನಕ್ಷೆಯನ್ನು ಉಚ್ಚ ನ್ಯಾಯಾಲಯವು ಪರಿಗಣಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. RSA 1639/2013 ವಜಾ ಆಗಿ ಮೂಲ ದಾವಾ ಸಂಖ್ಯೆ 156/2001 ರ ತೀರ್ಮಾನವೇ ಅಂತಿಮ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-12 ದಾಖಲೆಯ ಆದಾರದ ಮೇಲೆ ನಾನು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

23. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಎಲ್ಲಾ ದಾಖಲಾತಿಗಳು ಈ ದಾವೆಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆ ನನ್ನ ಮಾರಾಟಗಾರರಾದ Oliver Wilfred Coelho ಮತ್ತು ಅವರ ತಾಯಿಯು ದಾಖಲೆ ಮಾಡಿರುವ ಓ. ಎಸ್. 156/2001 ದಾವೆಯು ವಜಾ ಆಗಿರುವ ಕಾರಣ ನಾನು ಅದೇ ನೆಲೆಯಲ್ಲಿ ಸದರಿ ಆಸ್ತಿಗೆ ದಾವೆಯನ್ನು ಸಲ್ಲಿಸಿ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಹಿಂದೆ ನಡೆದಿರುವ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸದರಿ ನಿಜ ಅಂಶವನ್ನು ಮುಚ್ಚಿಟ್ಟು ನಾನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ನನ್ನ ಪರವಾಗಿ ಆದೇಶ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

<u>ಸಾಕ್ಷಿಯ ಸಹಿ</u>